ಕರ್ನಾಟಕ ಸರ್ಕಾರ

(ಕೃಷಿ ಇಲಾಖೆ)

ಸಂಖ್ಯೆ :ಉ.ಕೃ.ನಿ/ಕೃಭಾ/ ಸುತ್ತೋಲೆ-5/2014-15.

ಕೇಂದ್ರ ಕಛೇರಿ, ಕೃಷಿ ಇಲಾಖೆ,
ಶೇಷಾದ್ರಿ ರಸ್ತೆ, ಬೆಂಗಳೂರು-1
ದಿನಾಂಕಃ 06-12-2014.

**ಸುತ್ತೋಲೆ-6**

**ವಿಷಯ:** ಕೃಷಿ ಭಾಗ್ಯ ಯೋಜನೆಯಡಿ ಹೋಬಳಿ ಮಟ್ಟದಲ್ಲಿ ಬ್ಯಾಂಕರ್ಸ್ ಹಾಗೂ ಆಯ್ಕೆಯಾದ ಫಲಾನುಭವಿಗಳೊಂದಿಗೆ ಯೋಜನೆಯ ಬಗ್ಗೆ ತರಬೇತಿ ಕೈಗೊಳ್ಳುವ ಕುರಿತು

**ಉಲ್ಲೇಖ:** ದಿನಾಂಕ: 24/11/2014 ರಂದು ಕೃಷಿ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಾಷ್ಟ್ರೀಕೃತ ಬ್ಯಾಂಕ್ ಅಧಿಕಾರಿಗಳೊಂದಿಗೆ ಕೃಷಿ ಭಾಗ್ಯ ಯೋಜನೆಯ ಸಭೆಯಲ್ಲಿ ಚರ್ಚಿಸಿದಂತೆ

****

ಮೇಲ್ಕಾಣಿಸಿದ ವಿಷಯದನ್ವಯ ಕೃಷಿ ಭಾಗ್ಯ ಯೋಜನೆಯಡಿ ಲಾಟರಿ ಮೂಲಕ ಆಯ್ಕೆಯಾಗಿ ಜಂಟಿ ಸಮೀಕ್ಷೆ ತಂಡದಿಂದ ಕ್ಷೇತ್ರ ಪರಿಶೀಲನೆಯಲ್ಲಿ ಅರ್ಹರಾದ ಫಲಾನುಭವಿಗಳಿಗೆ, ಸಾವಯವ ಭಾಗ್ಯ ಯೋಜನೆಯಡಿ ಬರುವ ರೈತ ಫಲಾನುಭವಿಗಳಿಗೆ, ಬೀಜೋತ್ಪಾದನಾ ರೈತರು, ಗಂಗಾ ಕಲ್ಯಾಣ ಫಲಾನುಭವಿಗಳು ಹಾಗೂ ಈಗಾಗಲೇ ಜಲಾನಯನ ಇಲಾಖೆಯಿಂದ ಕೃಷಿ ಹೊಂಡ ಹೊಂದಿರುವ ರೈತ ಫಲಾನುಭವಿಗಳು ಹಾಗೂ ಇನ್ನಿತರ ಆಸಕ್ತ ರೈತರೊಂದಿಗೆ ತಮ್ಮ ವ್ಯಾಪ್ತಿಗೆ ಬರುವ ಲೀಡ್ ಬ್ಯಾಂಕ್ ಅಧಿಕಾರಿಗಳ ಜೊತೆ ಹೋಬಳಿ ಮಟ್ಟದಲ್ಲಿ ತರಬೇತಿಯನ್ನು ಕೈಗೊಂಡು ಈ ಕೆಳಕಂಡ ವಿಷಯವನ್ನು ಚರ್ಚಿಸಲು ಸೂಚಿಸಿದೆ.

1. ಕೃಷಿ ಭಾಗ್ಯ ಯೋಜನೆಯಡಿ ವಿವರವಾದ ಮಾಹಿತಿಯನ್ನು ನೀಡುವುದು.
2. ಆಯ್ಕೆಯಾದ ಫಲಾನುಭವಿಗಳಿಗೆ ಲೀಡ್ ಬ್ಯಾಂಕ್/ ಸರ್ವಿಸ್ ಬ್ಯಾಂಕ್ ಸಂಪರ್ಕಿಸಿದಲ್ಲಿ ಸಾಲ ಸೌಲಭ್ಯ ದೊರೆಯುವ ಬಗ್ಗೆ ಮಾಹಿತಿ ನೀಡುವುದು.

**ಸಾಲ ಸೌಲಭ್ಯಕ್ಕಾಗಿ ಬ್ಯಾಂಕರ್ಸ್‌ಗಳೊಂದಿಗೆ ಚರ್ಚಿಸಲಾಗಿದ್ದು ಸಾಲ ಪಡೆಯುವ ರೈತರಿಗೆ ಅನುಸರಿಸಬೇಕಾದ ಕ್ರಮಗಳು ಈ ಕೆಳಕಂಡಂತಿವೆ:**

1. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಮಿತಿಯಿಂದ ಅನುಮೋದನೆಯಾದ ಫಲಾನುಭವಿಗಳ ಪಟ್ಟಿ ಹಾಗೂ ಪ್ರತಿಯೊಬ್ಬ ಫಲಾನುಭವಿಯ ಪ್ರೊಜೆಕ್ಟ ರಿಪೋರ್ಟ /ಅಂದಾಜು ಪಟ್ಟಿಯನ್ನು(estimate) ಜಂಟಿ ಕೃಷಿ ನಿರ್ದೇಶಕರು ಸಂಬಂಧಪಟ್ಟ ಲೀಡ್ ಬ್ಯಾಂಕ್ ಗೆ ಕಳುಹಿಸಿಕೊಡುವುದು.
2. ರೈತ ಫಲಾನುಭವಿ ಸಂಬಂಧಪಟ್ಟ ಲೀಡ್ ಬ್ಯಾಂಕ್ ಅಥವಾ ಸೇವಾ ಕ್ಷೇತ್ರ (service area) ಬ್ಯಾಂಕ್‌ಗಳಿಗೆ ಭೇಟಿ ನೀಡಿ ಯೋಜನೆಗೆ ಬೇಕಾಗುವ ಬ್ಯಾಂಕ್ ಸಾಲ ಪಡೆಯಬಹುದು.
3. ಫಲಾನುಭವಿ ಭೂ ಹಿಡುವಳಿ ಪ್ರಮಾಣ ಪತ್ರ(ಪಹಣಿ), ತೆರಿಗೆ ಪಾವತಿ ರಸೀದಿ, ಇತ್ತೀಚಿನ ಭಾವಚಿತ್ರ ಮುಂತಾದ ದಾಖಲಾತಿಗಳನ್ನು ಸಾಲ ಮಂಜೂರಾತಿಗಾಗಿ ಸಲ್ಲಿಸುವುದು.

4. ಬ್ಯಾಂಕ್‌ಗಳು ಅನುಮೋದನೆಯಾದ ಅಂದಾಜು ವೆಚ್ಚ ಅಥವಾ ಪೂರ್ವ ಯೋಜನೆಯ ಮೌಲ್ಯಮಾಪನದ ಮೇಲೆ ಸಾಲ ಮಂಜೂರು ಮಾಡಲು ತಿಳಿಸಲಾಗಿದೆ.
5. ರೈತ ಫಲಾನುಭವಿಯು ಕೃಷಿ ಭಾಗ್ಯ ಯೋಜನೆಯ ಕೃಷಿ ಘಟಕ (ಪಾಲಿಹೌಸ್ ರಹಿತ) ದಡಿ ಅನುಷ್ಠಾನಕ್ಕಾಗಿ ತಗಲಬಹುದಾದ ಅಂದಾಜು ವೆಚ್ಚದ ಕೋಟೆಷನ್ಸ್‌ನ್ನು ಆರಂಭದಲ್ಲಿ ಮತ್ತು ಕೆಲಸ ಪೂರ್ಣಗೊಂಡ ನಂತರ ಸೂಕ್ತ ರಶೀದಿಯೊಂದಿಗೆ ಸಂಬಂಧಪಟ್ಟ ಬ್ಯಾಂಕ್‌ಗಳಿಗೆ ಸಲ್ಲಿಸುವುದು.
6. ಫಲಾನುಭವಿಗಳು ಪ್ರಾರಂಭದಲ್ಲಿ ಕಾರ್ಯ ನಿರ್ವಹಿಸಲು ಸ್ವಲ್ಪ ಪ್ರಮಾಣದ ಮುಂಗಡ ಹಣವನ್ನು ಸಂಬಂಧಪಟ್ಟ ಬ್ಯಾಂಕು ಒದಗಿಸುವುದು.
7. ಬ್ಯಾಂಕ್‌ಗಳು ಸಾಲದ ಮೊತ್ತವನ್ನು ನಿಯಮನುಸಾರ ಕೊಟೇಷನ್ಸ್ ಹಾಗೂ ರಶೀದಿಗಳನ್ನು ಪರಿಗಣಿಸಿ ನೇರವಾಗಿ ಕಾರ್ಯನಿರ್ವಹಿಸಿದ ಅಧಿಕೃತ ವಿತರಕರಿಗೆ ಅಥವಾ ಏಜನ್ಸಿಗಳಿಗೆ ನೇರವಾಗಿ ಬಿಡುಗಡೆ ಮಾಡುವುದು.
8. ಈ ಯೋಜನೆಯಡಿ ನೀಡಿದ ಸಾಲವನ್ನು Term loan ಎಂದು ಪರಿಗಣಿಸುವುದು.
9. ಇಲಾಖೆಯ ಅಧಿಕಾರಿಗಳು ಇಲಾಖೆಯ ಸುತ್ತೋಲೆ-1 ರಲ್ಲಿ ಹೊರಡಿಸಿರುವಂತೆ ಕೆಲಸದ ಪ್ರಗತಿ/ ಕೆಲಸ ಪೂರ್ಣಗೊಂಡ ಬಗ್ಗೆ ಪ್ರಮಾಣಿಕರಿಸಿ ಸಂಬಂಧಪಟ್ಟ ರಶೀದಿಯೊಂದಿಗೆ ಬ್ಯಾಂಕ್‌ಗಳಿಗೆ ವರದಿಯನ್ನು ಸಲ್ಲಿಸುವುದು.
10. ನಿವ್ವಳ ಬ್ಯಾಂಕ್ ಲೋನ್ ಮೊತ್ತದ ಸಹಾಯ ಧನವು ಒಂದು ಲಕ್ಷಕ್ಕಿಂತ ಕಡಿಮೆ ಇದ್ದರೆ ಭೂಮಿ ಆಡ ಮಾಡುವ ಅಗತ್ಯವಿಲ್ಲವೆಂದು ಈಗಾಗಲೆ ಉಲ್ಲೇಖ-1 ರ ಸಭೆಯಲ್ಲಿ ತಿರ್ಮಾನಿಸಲಾಗಿರುತ್ತದೆ. (Banks not to insist for mortgage of land wherever net of subsidy loan amount is less than one lakh)
11. ಇಲಾಖೆಯಿಂದ ಸಹಾಯಧನವನ್ನು ನಂತರ ಬ್ಯಾಂಕ್ ಖಾತೆಗೆ ನೀಡಲಾಗುವುದು. ರೈತರ ಪಾಲನ್ನು ರೈತರು ಹಿಂತಿರುಗಿಸಬೇಕಾಗುವುದು.

**ಸಾಲ ಪಡೆಯದ ರೈತರಿಗೆ ಅನುಸರಿಸಬೇಕಾದ ಕ್ರಮಗಳು ಈ ಕೆಳಕಂಡಂತಿವೆ:**

1. ಜಿಲ್ಲಾ ಮಟ್ಟದ ಸಮಿತಿಯು ಅರ್ಹ ಫಲಾನುಭವಿಗಳ ಕೈಗೊಳ್ಳುವ ಘಟಕಗಳ ವೆಚ್ಚದ ಅಂದಾಜನ್ನು ಅನುಮೋದಿಸಿದ ನಂತರ ಆಯಾ ಫಲಾನುಭವಿಗಳಿಗೆ ಮಂಜೂರಾತಿ ಆದೇಶ ನೀಡುವುದು.
2. ಫಲಾನುಭವಿಗಳು ಅನುಮೋದಿತ ಅಂದಾಜಿನನ್ವಯ ಘಟಕಗಳ ಅನುಷ್ಟಾನವನ್ನು ತಮ್ಮ ವೆಚ್ಚದಲ್ಲಿಯೇ ಮಾಡುವುದು. ನಂತರ, ಇಲಾಖಾ ಅಧಿಕಾರಿಗಳಿಗೆ ಕಾರ್ಯ ಪ್ರಗತಿಯಾಗಿರುವ ಬಗ್ಗೆ ವರದಿ ಸಲ್ಲಿಸುವುದು.
3. ನಂತರ, ಇಲಾಖಾ ಅಧಿಕಾರಿಗಳು ಫಲಾನುಭವಿಗಳ ಘಟಕ ಅನುಷ್ಟಾನದ ಪ್ರಗತಿಯನ್ನು ಹಂತ ಹಂತವಾಗಿ ಪರಿಶೀಲಿಸಿ ಧೃಡೀಕರಿಸುವುದು.
4. ನಂತರ, ಪ್ರಗತಿಗನುಗುಣವಾಗಿ ಹಂತಹಂತವಾಗಿ ರೈತರ ಖಾತೆಗೆ ನೇರವಾಗಿ ಸಹಾಯಧನದ ಅನುದಾನವನ್ನು RTGS ಮುಖಾಂತರ ವರ್ಗಾಯಿಸುವುದು.

ಕೃಷಿ ನಿರ್ದೇಶಕರು

ಪ್ರತಿಯನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು (23 ಜಿಲ್ಲೆಗಳು) ಇವರಿಗೆ ರವಾನಿಸುತ್ತಾ ಕೂಡಲೇ ಕ್ರಮ ಕೈಗೊಂಡು ವರದಿಯನ್ನು ಸಲ್ಲಿಸಲು ಸೂಚಿಸಿದೆ.
ಜಿಲ್ಲೆಯ ಎಲ್ಲಾ ಲೀಡ್ ಬ್ಯಾಂಕ್ ಅಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ ರವಾನಿಸಿದೆ